Strike by the N.G.Os. of the Mysore State

ಶ್ರೀ ಎಸ್. ಗೋಪಾಲಗೌಡ.—ಕಾರಣಾಂತರದಿಂದ ಹಾಗೆ ಆಗುತ್ತಾ ಇದೆ, ಅದಕ್ಕೆ ವಿಷಾದ ಪಡುತ್ತೇನೆ. ಇನ್ನೊಂದು ವಿಷಯದ ಬಗ್ಗೆ ತಮ್ಮ ಅನುಮತಿ ಪಡೆದು ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ. ನಾನು ಎರಡು ನೂಚನೆಗಳನ್ನು ಕಳುಹಿಸಿದ್ದೆ. ಒಂದು ಸ್ಟೈಕ್ ಬಗ್ಗೆ, ಇನ್ನೊಂದು ಚಳ್ಳಕೆರೆ, ಬಾಗೇಪಲ್ಲಿ, ಕೋಲಾರ ಈ ಪ್ರದೇಶಗಳಲ್ಲಿ ಕ್ಷಾಮಪರಿಸ್ಥಿತಿ ಇದೆ. ಕ್ಷಾಮ ಪರಿಸ್ಥಿತಿ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದರಿಂದ ಅದರ ಬಗ್ಗೆ ತಮಗೆ ಧನ್ಯವಾದ ಗಳನ್ನು ಅರ್ಪಿಸುತ್ತೇನೆ. ಈ ದಿವಸ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ; ತುರ್ತು ಆಯೋಗದ ಬಗ್ಗೆ ಅವರು ಏನಾದರೂ ಒಂದು ಉತ್ತರ ಕೊಟ್ಟರೆ ಒಳ್ಳೆಯದು.

Mr. SPEAKER.—I have admitted the hon. Member's call attention notice with regard to the hunger strike of Government employees. I am passing it on to the Government. It will come up in a day or two.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ತಾವು ಹೇಳಿದ ಪ್ರಕಾರ ಸ್ಟೈಕ್, ರಾಕ್‌ಔಟ್ ಯಾವುದೂ ಕೂಡ ಅಲ್ಲ ಈಗ ನಡೆಯುತ್ತಾ ಇರುವುದು. ಅವರು ಮಾಡುತ್ತಾ ಇರುವುದು ಉಪವಾಸ. ಈ ದೇಶದ ಸುಮಾರು ಎರಡು ಲಕ್ಷ ನೌಕರರ ಪರವಾಗಿ ಸರ್ಕಾರದವರ ಗಮನವನ್ನು ಸೆಳೆಯು ವುದಕ್ಕಾಗಿ ಅವರು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಾ ಇದ್ದಾರೆ. ಶಾಸನ ಸಭೆ, ಅದರಲ್ಲೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕ ನಾವು ಇವತ್ತು ಈ ಪ್ರಜಾಪ್ರಭುತ್ವ ಜನರಿಂದ ಎಷ್ಟು ದೂರ ಇದೆ, ಎಷ್ಟು ಹತ್ತಿರ ಇದೆ ಎಂಬುದನ್ನು ತಿಳಿದುಕೊಳ್ಳ ಬೇಕಾ ಗಿದೆ. ಇಂತಹ ವಿಚಾರಗಳನ್ನು ಅವಸರದ ನಿರ್ಣಯದ ಮುಖಾಂತರ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದಿದ್ದರೆ ಜೆಮಾಕ್ರೆಸಿ ಬಗ್ಗೆ ನಾವು ನಂಬಿಕೆ ಕಳೆದುಕೊಳ್ಳತಕ್ಕ ಮಾರ್ಗವಾಗುತ್ತದೆ. ಇವತ್ತು ಸಾರ್ವಜನಿಕ ಅಭಿಪ್ರಾಯವನ್ನು ಸೆಳೆಯತಕ್ಕ ಈ ವಿಚಾರ ಬಹಳ ಪ್ರಾಮುಖ್ಯವಾಗಿದೆ. ಇದನ್ನು ಇವತ್ತು ಈ ಕೂಡಲೇ ತೀರ್ಮಾನ ಮಾಡಿ ದೇಶದ ಮುಖ್ಯಮಂತ್ರಿಗಳು ಇದರ ಬಗ್ಗೆ ಸರ್ಕಾರದ ಅಭಿಪ್ರಾಯವೇನಿದೆ ಎಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ. ಇವತ್ತು ಇದರ ಬಗ್ಗೆ ಸರ್ಕಾರದ ನಿಲುವೇನೆಂಬುದನ್ನು ಈ ದೇಶದ ಜನತೆಗೆ ಮತ್ತು ನೌಕರವರ್ಗದವರಿಗೆ ಈ ಕೂಡಲೇ ತಿಳಿಸಬೇಕೆಂದು ತಮ್ಮ ಮುಖೇನ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ನಾನು ಒಂದು ನಿಲುವಳಿ ನೂಚನೆಯನ್ನು ಕಳುಹಿಸಿದ್ದೆ, ಅದರ ಬಗ್ಗೆ ಏನು ಹೇಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ)—ಸ್ವಾಮಿ, ತಮ್ಮಲ್ಲಿ ನನ್ನದೊಂದು ವಿನಂತಿ ಇದೆ.

Mr. SPEAKER.—The hon. Member may please resume his seat.

ಶ್ರೀ ವಾಟಾಳ್ ನಾಗರಾಜ್.—ನಾವು ಹೇಳತಕ್ಕದ್ದು ಬಹಳ ಪ್ರಾಮುಖ್ಯವಾದ ವಿಷಯ. ಆದುದರಿಂದ ತಾವು ಅದನ್ನು ಕೇಳಲೇಬೇಕು.

ಅಧ್ಯಕ್ಷರು.—ದಯವಿಟ್ಟು ತಾವು ಕೂಡ್ರಿ.

Naming and Suspension of Sri Vatal Nagaraj

ಶ್ರೀ ವಾಟಾಳ್ ನಾಗರಾಜ್.—ಅಲ್ಲ ಸ್ವಾಮಿ, ನಾನು ಏನು ಹೇಳುತ್ತೇನೆಂಬುದನ್ನು ತಾವು ಕೇಳುವುದಿಲ್ಲವೋ ?

Mr. SPEAKER.—The hon. Member is defying the orders of the Chair. Under Rule 309 of the Rules of Precedure, the hon. Member should leave the House immediately and not enter till the end of to-day's proceedings.